# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಗ್ರಾಮ ಪಂಚಾಯತಿ ನೌಕರರಿಗೆ ಸರ್ಕಾರದ ನಿಧಿಯಿಂದ ವೇತನ ಪಾವತಿಸುವ ಬಗ್ಗೆ.

ಓದಲಾಗಿದೆ:-

1. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 112 ಮತ್ತು 113.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 102 ವಿಇಎಲ್ 90, ದಿನಾಂಕ: 10-01-1994.
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 67 ಗ್ರಾಪಂಸಿ 2006, ದಿನಾಂಕ: 04-01-2008.
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 22 ಗ್ರಾಪಂಸಿ 2014, ದಿನಾಂಕ: 10-09-2014.
5. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 252 ಗ್ರಾಪಂಅ 2016, ದಿನಾಂಕ: 23-03-2016.
6. ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 71 ಎಲ್‌ಡಬ್ಲ್ಯೂಎ 2015 ದಿನಾಂಕ :04-08-2016.
7. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 103 ಗ್ರಾಪಂಸಿ 2016, ದಿನಾಂಕ: 02-11-2017.
8. ದಿನಾಂಕ: 19.07.2017ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ತೀರ್ಮಾನ.

***

ಪ್ರಸ್ತಾವನೆ:

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 112 ರಡಿ ಸರ್ಕಾರವು ಆದೇಶದ ಮೂಲಕ ಗ್ರಾಮ ಪಂಚಾಯತಿಗಳ ಸಿಬ್ಬಂದಿ ಸ್ವರೂಪ, ವೇತನ ಶ್ರೇಣಿಗಳು ಮತ್ತು ನೇಮಕಾತಿ ವಿಧಾನವನ್ನು ನಿರ್ದಿಷ್ಟಪಡಿಸಬಹುದಾಗಿದೆ. ಸದರಿ ಅಧಿನಿಯಮದ ಪ್ರಕರಣ 113 ರಂತೆ ಗ್ರಾಮ ಪಂಚಾಯತಿ ನೌಕರರನ್ನು ನೇಮಕ ಮಾಡಿಕೊಂಡು ಗ್ರಾಮ ಪಂಚಾಯತಿ ನಿಧಿಯಿಂದ ಅವರ ಸಂಬಳಗಳನ್ನು ಸಂದಾಯ ಮಾಡಬಹುದಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2), (3) ಮತ್ತು (4) ರ ಸರ್ಕಾರದ ಆದೇಶಗಳು ಮತ್ತು ಸರ್ಕಾರದ ಅಧಿಕೃತ ಜ್ಞಾಪನದಲ್ಲಿ ರಾಜ್ಯದಲ್ಲಿನ ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ಸ್ವರೂಪ, ವೇತನ ಮತ್ತು ನೇಮಕಾತಿ ವಿಧಾನವನ್ನು ಸರ್ಕಾರವು ನಿರ್ದಿಷ್ಟಪಡಿಸಿದ್ದು, ಗ್ರಾಮ ಪಂಚಾಯತಿಗಳ ಆಡಳಿತ ನಿರ್ವಹಣೆಯನ್ನು ಸುಗಮ ಹಾಗೂ ಸುಲಲಿತಗೊಳಿಸುವ ನಿಟ್ಟಿನಲ್ಲಿ ರಾಜ್ಯದ ಗ್ರಾಮ ಪಂಚಾಯತಿಗಳಲ್ಲಿ 1) ಬಿಲ್‌ಕಲೆಕ್ಟರ್, 2) ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್, 3) ವಾಟರ್‌ಮೆನ್/ಪಂಪ್ ಆಪರೇಟರ್/ಪಂಪ್ ಮೆಕಾನಿಕ್, 4) ಜವಾನ ಮತ್ತು 5) ಸ್ವಚ್ಛತಾಗಾರರು ಕಾರ್ಯನಿರ್ವಹಿಸುತ್ತಿರುತ್ತಾರೆ. ಮೇಲೆ ಓದಲಾದ ಕ್ರಮ ಸಂಖ್ಯೆ (7) ರ ಸರ್ಕಾರದ ಆದೇಶದಲ್ಲಿ ರಾಜ್ಯದ ಪ್ರತಿ ಗ್ರಾಮ ಪಂಚಾಯತಿಗೆ ಒಂದು ಡಾಟಾ ಎಂಟ್ರಿ ಆಪರೇಟರ್ ಹುದ್ದೆ ಸೃಜಿಸಿ ನೇಮಕಾತಿ ವಿಧಾನ ನಿರ್ದಿಷ್ಟಪಡಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರ ಸರ್ಕಾರದ ಆದೇಶದಲ್ಲಿ ಗ್ರಾಮ ಪಂಚಾಯತಿ ನಿಧಿ ಖಾತೆಯಿಂದಲೇ ಗ್ರಾಮ ಪಂಚಾಯತಿ ನೌಕರರಿಗೆ ವೇತನ ಪಾವತಿ ಮಾಡಲಾಗುತ್ತಿದ್ದು, ಗ್ರಾಮ ಪಂಚಾಯತಿ ನೌಕರರ ವೇತನ ಪಾವತಿಗಾಗಿ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆದು ಶಾಸನಬದ್ಧ ಅನುದಾನದ ಶೇ. 40 ರಷ್ಟನ್ನು ಸದರಿ ಖಾತೆಗೆ ಜಮಾ ಮಾಡಿ ಆ ಬ್ಯಾಂಕ್ ಖಾತೆಯಿಂದಲೇ ಕಡ್ಡಾಯವಾಗಿ ಗ್ರಾಮ ಪಂಚಾಯತಿ ನೌಕರರಿಗೆ ವೇತನ ಪಾವತಿಸಲು ಕ್ರಮ ವಹಿಸುವಂತೆ ನಿರ್ದೇಶನ ನೀಡಲಾಗಿದೆ. ಮೇಲೆ ಓದಲಾದ ಕ್ರಮ ಸಂಖ್ಯೆ: (6) ರ ಸರ್ಕಾರದ ಅಧಿಸೂಚನೆಯಂತೆ ರಾಜ್ಯದಲ್ಲಿನ ಗ್ರಾಮ ಪಂಚಾಯತಿ ನೌಕರರಿಗೆ ಕನಿಷ್ಠ ವೇತನ ಮತ್ತು ತುಟ್ಟಿ ಭತ್ಯೆಯನ್ನು ಪಾವತಿಸಲು ನಿರ್ದೇಶನ ನೀಡಲಾಗಿದೆ.

ಈ ಹಿಂದೆ ರಾಜ್ಯದ ವಿವಿಧ ಗ್ರಾಮ ಪಂಚಾಯತಿಗಳಲ್ಲಿ ನೌಕರರನ್ನು ನೇಮಕಾತಿ ಮಾಡಿಕೊಂಡಿದ್ದರೂ ನಿಯಮಾನುಸಾರ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಅನುಮೋದನೆ ದೊರೆಯದೆ ನೌಕರರು ಸಕ್ರಮಾತಿಗೊಂಡಿರಲಿಲ್ಲ. ಸರ್ಕಾರದ ವತಿಯಿಂದ ನಿರ್ದೇಶನ ನೀಡಿ ನಿಯಮಾನುಸಾರ ನೇಮಕಗೊಂಡು ಅನುಮೋದನೆ ದೊರೆಯದ ಸುಮಾರು 35,000ಕ್ಕಿಂತ ಹೆಚ್ಚು ನೌಕರರಿಗೆ ಅನುಮೋದನೆ ದೊರಕಿಸಿ ಸೇವಾ ಸಕ್ರಮಾತಿಗೊಳಿಸಲಾಯಿತು.

ಈ ಗ್ರಾಮ ಪಂಚಾಯತಿ ನೌಕರರಿಗೆ ಗ್ರಾಮ ಪಂಚಾಯಿತಿ ವತಿಯಿಂದ ತನ್ನ ಸಂಪನ್ಮೂಲ ಹಾಗೂ ಸರ್ಕಾರದ ವತಿಯಿಂದ ನೀಡಲಾಗುವ ಶಾಸನಬದ್ಧ ಅನುದಾನದ ಪೈಕಿ ಶೇ. 40 ರಷ್ಟನ್ನು ಉಪಯೋಗಿಸಿಕೊಂಡು ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ಕನಿಷ್ಠ ವೇತನ ನೀಡಲು ಅವಕಾಶ ಕಲ್ಪಿಸಲಾಗಿದೆ. ಅನೇಕ ಗ್ರಾಮ ಪಂಚಾಯಿತಿಗಳಲ್ಲಿ ಸ್ವಂತ ಸಂಪನ್ಮೂಲದ ಕೊರತೆಯಿಂದಾಗಿ ತನ್ನ ನೌಕರರಿಗೆ ಕಾರ್ಮಿಕ ಇಲಾಖೆ ನಿಗದಿಪಸಿರುವ ಕನಿಷ್ಠ ವೇತನವನ್ನು ನಿಗದಿತ ಅವಧಿಯೊಳಗೆ ಪಾವತಿಸದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ವಿಷಯದ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಿನಾಂಕ: 19.07.2017ರಂದು ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆ ಸಭೆ ನಡೆಸಿ ವಿಷಯವನ್ನು ಮನವರಿಕೆ ಮಾಡಿ ಹಲವಾರು ವರ್ಷಗಳ ಗ್ರಾಮ ಪಂಚಾಯತಿ ನೌಕರರ ಸಮಸ್ಯೆಯನ್ನು ಮನವರಿಕೆ ಮಾಡಲಾಗಿ ಸರ್ಕಾರದ ವತಿಯಿಂದ ವೇತನ ಪಾವತಿಸಲು ನಿರ್ಧರಿಸಲಾಯಿತು.

ಪ್ರಸ್ತುತ ರಾಜ್ಯದ ಗ್ರಾಮ ಪಂಚಾಯತಿಗಳ ಸಿಬ್ಬಂದಿ ವರ್ಗದ ಮಾದರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 1) ಬಿಲ್‌ಕಲೆಕ್ಟರ್, 2) ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್, 3) ವಾಟರ್‌ಮೆನ್/ಪಂಪ್ ಆಪರೇಟರ್/ಪಂಪ್ ಮೆಕಾನಿಕ್, 4) ಜವಾನ ಮತ್ತು 5) ಸ್ವಚ್ಛತಾಗಾರರು ಸೇರಿದಂತೆ 50,114 ನೌಕರರುಗಳಿಗೆ, ದಿನಾಂಕ:01-03-2018 ರಿಂದ ಜಾರಿಗೆ ಬರುವಂತೆ ಮತ್ತು ಮೇಲೆ ಓದಲಾದ ಕ್ರಮ ಸಂಖ್ಯೆ (7) ರ ಸರ್ಕಾರದ ಆದೇಶದಂತೆ ನೇಮಕಗೊಳ್ಳುವ ಡಾಟಾ ಎಂಟ್ರಿ ಆಪರೇಟರ್ ನೌಕರರಿಗೆ ಅವರು ನೇಮಕವಾದ ದಿನಾಂಕದಿಂದ ಸರ್ಕಾರದ ವತಿಯಿಂದ ವೇತನ ಪಾವತಿಸಲಾಗುವುದು.

ಅದರಂತೆ ಈ ಕೆಳಕಂಡ ಆದೇಶ.

<u>ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 74 ಗ್ರಾಪಂಸಿ 2017 (ಭಾಗ-1) ಬೆಂಗಳೂರು, ದಿನಾಂಕ:02-03-2018.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಸ್ತುತ ರಾಜ್ಯದ ಗ್ರಾಮ ಪಂಚಾಯತಿಗಳ ಸಿಬ್ಬಂದಿ ವರ್ಗದ ಮಾದರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 1) ಬಿಲ್‌ಕಲೆಕ್ಟರ್, 2) ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್, 3) ವಾಟರ್‌ಮೆನ್/ಪಂಪ್ ಆಪರೇಟರ್/ಪಂಪ್ ಮೆಕಾನಿಕ್, 4) ಜವಾನ ಮತ್ತು 5) ಸ್ವಚ್ಛತಾಗಾರ ವೃಂದದ ಗ್ರಾಮ ಪಂಚಾಯತಿ ನೌಕರರುಗಳಿಗೆ ದಿನಾಂಕ: 01-03-2018 ರಿಂದ ಜಾರಿಗೆ ಬರುವಂತೆ ಮತ್ತು ಮೇಲೆ ಓದಲಾದ ಕ್ರಮ ಸಂಖ್ಯೆ (7) ರ ಸರ್ಕಾರದ ಆದೇಶದಂತೆ ನೇಮಕಗೊಳ್ಳುವ ಡಾಟಾ ಎಂಟ್ರಿ ಆಪರೇಟರ್ ನೌಕರರಿಗೆ ಅವರು ನೇಮಕವಾದ ದಿನಾಂಕದಿಂದ ಸರ್ಕಾರದ ನಿಧಿಯಿಂದ ವೇತನ ಪಾವತಿಸಲು ಆದೇಶಿಸಿದೆ.

ಗ್ರಾಮ ಪಂಚಾಯತಿ ನೌಕರರಿಗೆ ವೇತನ ಪಾವತಿಸುವ ಬಗ್ಗೆ ಮಾರ್ಗಸೂಚಿಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ:ಆಇ 486 ವೆಚ್ಚ-6 / 2017 ದಿನಾಂಕ: 31-01-2018 ರಂದು ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

2/3/18

(ಎಂ.ಕೆ. ಕೆಂಪೇಗೌಡ)
ನಿರ್ದೇಶಕರು (ಪಂ.ರಾಜ್-1) ಹಾಗೂ
ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

2/3/18

<u>ಗೆ:</u>

1) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು.

ಕಡತ ಪರಿಶೀಲಿಸಿದೆ.

ಪ್ರಸ್ತುತ 6024 ಗ್ರಾಮ ಪಂಚಾಯಿತಿಗಳಲ್ಲಿ 50114 ನೌಕರರು ಸೇವೆ ಸಲ್ಲಿಸುತ್ತಿದ್ದಾರೆ. ಈ ನೌಕರರ ಸೇವೆಯನ್ನು ಪ್ರಸ್ತುತ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ನೇಮಕಾತಿಯನ್ನು ಜಿಲ್ಲಾ ಪಂಚಾಯತಿಗಳಿಂದ ದಿನಾಂಕ 10/9/2014ರಂದು ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ22:ಗ್ರಾಪಂಸಿ 2014ರಂತೆ ಅನುಮೋದನೆ ಮಾಡಲು ನಿಯಮಗಳನ್ನು ರೂಪಿಸಿ 35 ಸಾವಿರಕ್ಕೂ ಹೆಚ್ಚು ನೌಕರರ ನೇಮಕಾತಿಯನ್ನು ಸಕ್ರಮಗೊಳಿಸಲಾಗಿತ್ತು. ಗ್ರಾಮ ಪಂಚಾಯತಿ ನೌಕರರು ಸೇವೆಯಲ್ಲಿ ನಿರತರಾಗಿದ್ದರೂ ಅವರಿಗೆ ಕನಿಷ್ಠ ವೇತನ, ಸೇವಾ ಭದ್ರತೆ ಮತ್ತು ನಿವೃತ್ತಿ ಉಪದಾನಗಳಂತಹ ಪ್ರಮುಖ ಶಾಸನಬದ್ಧ ಸೌಲಭ್ಯಗಳಿಂದ ವಂಚಿತರಾಗಿದ್ದರು. ಶೋಷಣೆಮುಕ್ತ ಸೇವಾ ವ್ಯವಸ್ಥೆಯನ್ನು ಜಾರಿಗೆ ತರಲು ಇವರುಗಳಿಗೆ ಗ್ರಾಮ ಪಂಚಾಯಿತಿ ವತಿಯಿಂದ ಕಾರ್ಮಿಕ ಇಲಾಖೆ ನಿಗದಿಪಡಿಸಿದ ಕನಿಷ್ಠ ವೇತನ ಪಾವತಿಸಲು ಕಾಲಕಾಲಕ್ಕೆ ನಿರ್ದೇಶನಗಳನ್ನು ಸರ್ಕಾರದ ವತಿಯಿಂದ ಹೊರಡಿಸಲಾಗಿತ್ತು.

ಈ ನಿರ್ದೇಶನಗಳ ಪಾಲನೆಯನ್ನು ಕಾಲಕಾಲಕ್ಕೆ ಪರಿಶೀಲಿಸಿದಾಗ ಕನಿಷ್ಠ ವೇತನ ಹಲವಾರು ಪ್ರಕರಣಗಳಲ್ಲಿ ಪಾವತಿಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿತ್ತು. ಕಾರ್ಮಿಕ ಇಲಾಖೆ ಕಾಲಕಾಲಕ್ಕೆ ಪರಿಷ್ಕರಿಸುವ ಕನಿಷ್ಠ ವೇತನ ಗ್ರಾಮ ಪಂಚಾಯತಿ ನೌಕರರಿಗೆ ದೊರೆಯಬೇಕು ಮತ್ತು ಯಾವುದೇ ಗ್ರಾಮ ಪಂಚಾಯತಿ ನೌಕರರು ಈಗಾಗಲೇ ಕನಿಷ್ಠ ವೇತನಕ್ಕಿಂತ ಹೆಚ್ಚಿನ ವೇತನ ಪಡೆಯುತ್ತಿದ್ದರೆ ಅಂಥವರ ವೇತನ ರಕ್ಷಣೆ ಮಾಡುವ ಉದ್ದೇಶದಿಂದ ಗ್ರಾಮ ಪಂಚಾಯತಿಗಳು ಶಾಸನಬದ್ಧ ಅನುದಾನ ಮತ್ತು ಸಂಪನ್ಮೂಲಗಳಿಂದ ನಿಗದಿತ ವೇತನ ಪಾವತಿ ಮಾಡಲು ಸಾಧ್ಯವಾಗದೇ ಇದ್ದುದರಿಂದ ಜಿಲ್ಲಾ ಪಂಚಾಯತಿಗಳ ವತಿಯಿಂದ ಅನುಮೋದಿತ/ಸಕ್ರಮಗೊಂಡ ಎಲ್ಲಾ ಗ್ರಾಮ ಪಂಚಾಯತಿಯ ನೌಕರರ ವೇತನವನ್ನು 1.3.2018ರಿಂದ ಕರ್ನಾಟಕ ಸರ್ಕಾರವೇ ಪಾವತಿಸಲು ನಿರ್ಣಯಿಸಲಾಗಿದೆ.

ಈ ಹಿನ್ನೆಲೆಯಲ್ಲಿ ದಿನಾಂಕ: 01-03-2018 ರಿಂದ 50114 ಗ್ರಾಮ ಪಂಚಾಯಿತಿ ನೌಕರರುಗಳಿಗೆ ವೇತನವನ್ನು ಸರ್ಕಾರದಿಂದ ಬಿಡುಗಡೆ ಮಾಡಲು ಮತ್ತು ಈ ವೇತನವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯ ಪಂಚತಂತ್ರ ತಂತ್ರಾಂಶದಲ್ಲಿ ಮಾನವ ಸಂಪನ್ಮೂಲ ಗಣಕೀಕೃತ (Computerized) ನಿರ್ವಹಣಾ ವ್ಯವಸ್ಥೆಯನ್ನು ಜಾರಿಗೆ ತರಲು ವೇತನ ಪಾವತಿ ವಿಳಂಬವಾಗದಂತೆ ಮತ್ತು ವೇತನ ಪಾವತಿ ಸಮಯಕ್ಕೆ ಸರಿಯಾಗಿ ಮಾಡಲು ಸೂಕ್ತ ವ್ಯವಸ್ಥೆ ರೂಪಿಸಿ ಸರ್ಕಾರಿ ಆದೇಶ ಹೊರಡಿಸಲು ಆದೇಶಿಸಿದೆ.

(ಎಚ್ ಕೆ ಪಾಟೀಲ)